# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಜಿ ನಾಗಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಂಡ್ರಿ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅಸಪ ಸಂಖ್ಯೆ: ಉಪಲೋಕ್/ ಜಿಎಲ್‌ಬಿ–7887/2015/ಡಿಆರ್‌ಇ–5 ದಿನಾಂಕ:07.09.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 31.08.2017 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

1. ಈ ದೂರನ್ನು ಶ್ರೀ ಕೆ.ಸಿದ್ದೇಶ ತಂದೆ ಕೆ.ಚಿನ್ನಪ್ಪ, ವಾಸ: ವಾರ್ಡ್ ನಂ.2, ಬಂಡ್ರಿ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಜಿ. ನಾಗಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಂಡ್ರಿ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ್ದಾರೆ.

2. ದೂರಿನ ಸಂಕ್ಷಿಪ್ತ ವಿವರ:–
ದೂರುದಾರರು ತಾನು ವಾಸವಿರುವ ಬಂಡ್ರಿ ಗ್ರಾಮದಲ್ಲಿ 1200 ನಳ ಸಂಪರ್ಕವಿದ್ದು, ಎದುರುದಾರರಿಗೆ ಈ ಬಗ್ಗೆ ಮಾಹಿತಿ ಕೇಳಿದಾಗ, ಬಂಡ್ರಿ ಗ್ರಾಮದಲ್ಲಿ ಕೇವಲ 290 ಸ್ವಂತ ನಳ ಸಂಪರ್ಕವಿರುವುದಾಗಿ, ಸಾರ್ವಜನಿಕ ನಳಗಳು 654 ಮಾತ್ರ ಇವೆಯೆಂದು ಮಾಹಿತಿ ನೀಡಿದ್ದಾರೆ. ಗ್ರಾಮ ಪಂಚಾಯಿತಿಯ ಸದಸ್ಯರು 2 ನಳಗಳ ಸಂಪರ್ಕ ಹೊಂದಿದ್ದಾರೆ. ಆದ್ದರಿಂದ ಈ ಬಗ್ಗೆ ವಿಚಾರಣೆ ನಡೆಸಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಅನುಪಾಲನಾ ವರದಿ/ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಅನುಪಾಲನಾ ವರದಿಯಲ್ಲಿ ದೂರುದಾರರು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಸದರಿ ಗ್ರಾಮದಲ್ಲಿ 1200 ಮನೆಗಳಿದ್ದರೂ ಎಲ್ಲರೂ ನಲ್ಲಿ ಸಂಪರ್ಕ ಹೊಂದಿರುವುದಿಲ್ಲ. ಸಂಪರ್ಕದ ಪರವಾನಿಗೆ ಪಡೆದವರು ಒಟ್ಟು 289 ಮನೆಗಳಿಗೆ ನಲ್ಲಿ ಸಂಪರ್ಕ ತೆಗೆದುಕೊಂಡಿದ್ದು, ಒಟ್ಟು 507 ಅಧಿಕೃತ ನಲ್ಲಿ ಸಂಪರ್ಕಗಳಿರುವುದಾಗಿಯೂ, ಪ್ರತಿ ತಿಂಗಳು ಗ್ರಾಮ ಪಂಚಾಯಿತಿಯ ಸದಸ್ಯರೊಂದಿಗೆ ಸ್ಥಳ ಪರಿಶೀಲನೆ ಮಾಡಲಾಗುತ್ತಿರುವುದಾಗಿಯೂ ತಾನು ಪ್ರಭಾರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದರೂ ಸಹ ಯಾವುದೇ ಅನಧಿಕೃತ ಸಂಪರ್ಕಕ್ಕೆ ಆಸ್ಪದ ನೀಡಿಲ್ಲವೆಂದು, ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಸ್ಥಳ ಪರಿಶೀಲಿಸಿದಲ್ಲಿ ಸತ್ಯಾಂಶ ತಿಳಿಯುತ್ತದೆ. ಆದ್ದರಿಂದ ಈ ಪ್ರಕರಣವನ್ನು ಮುಕ್ತಾಯ ಮಾಡಬೇಕೆಂದು ಕೋರಿರುತ್ತಾರೆ.

4. ಎದುರುದಾರರ ಅನುಪಾಲನಾ ವರದಿ/ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ತನಿಖೆಯೂ ಯಾವಾಗಲೂ 3ನೇ ವ್ಯಕ್ತಿಯಿಂದ ಆಗಬೇಕು, ಎದುರುದಾರರು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ತನಿಖೆ ಮಾಡಬೇಕೆಂದು ನಿರ್ದೇಶಿಸುವುದು ಸರಿಯಲ್ಲ, ಬಂಡ್ರಿ ಗ್ರಾಮ ಪಂಚಾಯಿತಿಯಲ್ಲಿ 8 ವರ್ಷಗಳಿಂದಲೂ ಡಿ.ಸಿ.ಬಿ ರಿಜಿಸ್ಟರ್ ಮಾಹಿತಿ ಇಲ್ಲ, ನಳಗಳ ತೆರಿಗೆ ಕಟ್ಟಿಸಿಕೊಂಡು ರಶೀದಿಗಳು, ಠೇವಣಿಯ ನಕಲು ಪ್ರತಿಗಳನ್ನು ಎದುರುದಾರರು ಹಾಜರುಪಡಿಸಿಲ್ಲ. ಆದ್ದರಿಂದ 3ನೇ ವ್ಯಕ್ತಿಯಿಂದ ತನಿಖೆ ಮಾಡಿಸಬೇಕೆಂದು ಕೋರಿರುತ್ತಾರೆ.

5. ಈ ಪ್ರಕರಣದಲ್ಲಿ ಸಂಗ್ರಹಿಸಿರುವ ದಸ್ತಾವೇಜುಗಳನ್ನು ಪರಿಶೀಲಿಸಲಾಗಿ, ದೂರುದಾರರ ಪ್ರಕಾರ ಬಂಡ್ರಿ ಗ್ರಾಮದಲ್ಲಿ 1200 ನಲ್ಲಿ ಸಂಪರ್ಕಗಳಿವೆ. ಎದುರುದಾರರ ಪ್ರಕಾರ ಕೇವಲ 507 ನಲ್ಲಿ ಸಂಪರ್ಕಗಳು ಇರುತ್ತವೆ. ದೂರುದಾರರಿಗೆ ಆರ್.ಟಿ.ಐ ಅಡಿಯಲ್ಲಿ ಕೊಟ್ಟಿರುವ ಮಾಹಿತಿಗೆ ಯಾವುದೇ ದಿನಾಂಕ ನಮೂದಿಸಿಲ್ಲ. ದಿನಾಂಕ:02.07.2015 ಎಂದು ಕಡೆಯ ದಾಖಲಾತಿಗಳಲ್ಲಿ ಎಲ್ಲಿಯೂ ದಿನಾಂಕವನ್ನು ನಮೂದಿಸಲಾಗಿಲ್ಲ. ಒಬ್ಬ ವ್ಯಕ್ತಿಗೆ 2 ನಳ ಸಂಪರ್ಕವನ್ನು ಕೊಟ್ಟಿರುವ ಬಗ್ಗೆ ಯಾವುದೇ ವಿವರಣೆಯನ್ನು ಎದುರುದಾರರು ಸಲ್ಲಿಸಿರುವುದಿಲ್ಲ. ಆದ್ದರಿಂದ, ಈ ಪ್ರಕರಣವನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಳ್ಳಾರಿ ಇವರಿಗೆ ತನಿಖೆ ಮಾಡಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

6. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಬಳ್ಳಾರಿ ಇವರು ತಮ್ಮ ತನಿಖಾ ವರದಿಯನ್ನು ಹಾಗೂ ಅದರ ಜೊತೆಯಲ್ಲಿ ಸಿ.ಡಿ ಯನ್ನು ಸಹ ಸಲ್ಲಿಸಿದ್ದಾರೆ. ಬಂಡ್ರಿ ಗ್ರಾಮದ ವಾರ್ಡ್ ನಂ.1 ರಿಂದ 4 ಗಳಲ್ಲಿ ಒಟ್ಟು 56 ಕಾನೂನುಬಾಹಿರ ನಳದ ಸಂಪರ್ಕಗಳನ್ನು ಕೊಡಲಾಗಿತ್ತು. ಗ್ರಾಮ ಪಂಚಾಯಿತಿಯ ಯಾವುದೇ ಸದಸ್ಯರು ಅಥವಾ ಸಾರ್ವಜನಿಕರು 2 ನಳಗಳ ಸಂಪರ್ಕ ಹೊಂದಿಲ್ಲ. ಊರಿನ ಕೆರೆಯಲ್ಲಿ ನೀರು ಕಡಿಮೆಯಾದ್ದರಿಂದ ಒಬ್ಬ ಖಾಸಗಿ ವ್ಯಕ್ತಿಯ ಕೊಳವೆ ಬಾವಿಯಿಂದ ಕೆಲವು ಶ್ರೀಮಂತ ವ್ಯಕ್ತಿಗಳು ನಳ ಸಂಪರ್ಕ ಹೊಂದಿದ್ದಾರೆ. ದೂರುದಾರರು ತಪ್ಪು ಗ್ರಹಿಕೆ ಮಾಡಿಕೊಂಡು ಈ ವಿಷಯದಲ್ಲಿ ದೂರನ್ನು ಸಲ್ಲಿಸಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ:31.12.2016 ರಂದು ತುರ್ತು ಸಭೆಯನ್ನು ನಡೆಸಿ ಕಾನೂನುಬಾಹಿರ ನಳಗಳ ಸಂಪರ್ಕವನ್ನು ಸಕ್ರಮಗೊಳಿಸಲು ನಿರ್ಣಯ ತೆಗೆದುಕೊಂಡು ಈ ಬಗ್ಗೆ ಡಂಗೂರ ಹೊರಡಿಸಿದ್ದಾರೆ. ಪ್ರತಿ ತಿಂಗಳು ನೀರಿನ ತೆರಿಗೆ ಪಾವತಿಸಿದ ವ್ಯಕ್ತಿಗಳ ಸಂಪರ್ಕಗಳನ್ನು ಸಕ್ರಮಗೊಳಿಸಲಾಗಿದೆ. 124 ಸಾರ್ವಜನಿಕ ನಳಗಳ ಸಂಪರ್ಕಗಳನ್ನು ಸ್ಥಗಿತಗೊಳಿಸಿ ಅವುಗಳಲ್ಲಿ 24 ಸಂಪರ್ಕಗಳನ್ನು ಮಾತ್ರ ಸಾರ್ವಜನಿಕರ ಉದ್ದೇಶಕ್ಕಾಗಿ ಇಡಲಾಗಿದೆ. ಈಗ ಯಾವುದೇ ಕಾನೂನುಬಾಹಿರ ನಳ ಸಂಪರ್ಕಗಳು ಇಲ್ಲ ಅಂತ ವರದಿಯನ್ನು ಸಲ್ಲಿಸಿದ್ದಾರೆ.

7. ಮೇಲ್ಕಂಡ ತನಿಖಾ ವರದಿಯ ಮೇಲೆ ದೂರುದಾರರಿಂದ ಪ್ರತ್ಯುತ್ತರ ಕೇಳಲಾಗಿದೆ. ದೂರುದಾರರು ತಮ್ಮ ಪ್ರತ್ಯತ್ತರದಲ್ಲಿ ಎದುರುದಾರರು ಆಕ್ಷೇಪಣೆ ಸಲ್ಲಿಸುವಾಗ ಬಂಡ್ರಿ ಗ್ರಾಮದಲ್ಲಿ ಯಾವುದೇ ಅಕ್ರಮ ನೀರಿನ ನಲ್ಲಿ ಸಂಪರ್ಕಗಳು ಇಲ್ಲ ಅಂತ ಹೇಳಿದ್ದರು. ಈಗ ತನಿಖೆಯಲ್ಲಿ 56 ಅಕ್ರಮ ನೀರಿನ ನಲ್ಲಿ ಪತ್ತೆಯಾಗಿವೆ. 120 ಸಾರ್ವಜನಿಕ ನೀರಿನ ನಲ್ಲಿಗಳು ಪತ್ತೆಯಾಗಿವೆ. ಅದ್ದರಿಂದ ಎದುರುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

8. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸುವಾಗ ಒಟ್ಟು 289 ಮನೆಗಳಿಗೆ ನಲ್ಲಿ ಸಂಪರ್ಕಗಳನ್ನು ಕಲ್ಪಿಸಲಾಗಿದೆ. ಇವರೆಲ್ಲಾ ಪರವಾನಿಗೆ ಪಡೆದಿರುವವರು ಅಂತ ಹೇಳಿರುತ್ತಾರೆ. 507 ಅಧಿಕೃತ ನಲ್ಲಿಗಳ ಸಂಪರ್ಕ ನೀಡಿದ್ದು 218 ಸಾರ್ವಜನಿಕ ನಲ್ಲಿಗಳು ಅಂತ ಯಾವುದೇ ಆಧಾರವಿಲ್ಲದೇ ಆಕ್ಷೇಪಣೆಯನ್ನು ಸಲ್ಲಿಸಿದ್ದಾರೆ. ಈಗ ಸುಮಾರು 56 ಅನಧಿಕೃತ ನಲ್ಲಿಗಳ ಸಂಪರ್ಕ ಇವೆ ಅಂತ ತನಿಖೆಯಲ್ಲಿ ಕಂಡುಬಂದಿದೆ. 124 ಸಾರ್ವಜನಿಕ ನಲ್ಲಿಗಳ ಪೈಕಿ 100 ನಲ್ಲಿಗಳ ಸಂಪರ್ಕವನ್ನು ನಿಷ್ಕ್ರಿಯಗೊಳಿಸಲಾಗಿದೆ. 24 ಸಾರ್ವಜನಿಕ ನಳಗಳನ್ನು ಮಾತ್ರ ಇಟ್ಟುಕೊಳ್ಳಲಾಗಿದೆ. ಎದುರುದಾರರು ಆಧಾರರಹಿತವಾಗಿ ಆಕ್ಷೇಪಣೆಗಳನ್ನು ಮಾಡಿದ್ದು ತನಿಖೆಯಲ್ಲಿ ಕಂಡುಬಂದಿರುವ 56 ಅನಧಿಕೃತ ನಳ ಸಂಪರ್ಕಗಳ ಬಗ್ಗೆ ಅವರಿಗೆ ಯಾವುದೇ ಮಾಹಿತಿ ಇರಲಿಲ್ಲ. ಆದರೂ ಸಹ ನಿರಾಧಾರವಾದ ಆಕ್ಷೇಪಣೆಗಳನ್ನು ಸಲ್ಲಿಸಿ ಎದುರುದಾರರು ಕರ್ತವ್ಯಲೋಪ ಎಸಗಿದ್ದಾರೆನ್ನಲು ಸಾಕಷ್ಟು ಆಧಾರಗಳಿವೆ.

9. ಆದುದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಾಮಗಳು 1966 ರ ನಿಯಮ 3(i) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬರುವುದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ, ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ,

ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/743/ಗ್ರಾಪಂಕಾ/2017 ಬೆಂಗಳೂರು, ದಿನಾಂಕ-12-10-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜಿ ನಾಗಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಂಡ್ರಿ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. (ಪುಟ ಸಂಖ್ಯೆ: 1 ರಿಂದ 131 ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ.
6. ಶ್ರೀ ಜಿ ನಾಗಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಂಡ್ರಿ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.